**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ರವರು ನಿಯಮ 72ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:137 - " ಕೊಪ್ಪಳ ಜಿಲ್ಲೆಯಲ್ಲಿ ಮಾನವ ಪ್ರಾಣಿ ಸಂಘರ್ಷ ಹೆಚ್ಚುತ್ತಿದೆ. ಸರ್ಕಾರ ಸೂಕ್ತ ರಕ್ಷಣಾ ಕ್ರಮಗಳನ್ನು ವಹಿಸದಕಾರಣ ದಾಳಿಗಳು ಮುಂದುವರಿದಿದೆ. ಕೊಪ್ಪಳ ಭಾಗದಲ್ಲಿ ಕರಡಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು ಕರಡಿಧಾಮ ಘೋಷಣೆಗೆ ಅರಣ್ಯ ಇಲಾಖೆ ಸಲ್ಲಿಸಿದ ಪ್ರಸ್ತಾವನೆ ಜಾಗದಲ್ಲಿ ಉಳಿದಿದ್ದು ವನ್ಯಜೀವಿ ಹಾಗೂ ಸಾರ್ವಜನಿಕರು ಆತಂಕದಲ್ಲಿ ಬದುಕುವ ಸ್ಥಿತಿ ನಿರ್ಮಾಣವಾಗಿದೆ. ಕೊಪ್ಪಳ ಜಿಲ್ಲೆಯ ಗ್ರಾಮಗಳಾದ ಹಿರೇಸೂಳಿಕೇರಿ, ಚಿಕ್ಕಸೂಳಿಕೇರಿ, ಆಚಾರತಿಮ್ಮಾಪುರ, ಮೆತಗಲ್, ಅರಸಿನಕೇರಿ, ಹಾಸಗಲ್, ಚಿಲಕ್ ಮುಖಿ, ಜಿನ್ನಾಪುರ, ಹೊಸುರು ಮೆತಗಲ್, ಇಂದರಗಿ ಭಾಗದಲ್ಲಿ ಕರಡಿಗಳು ಹೆಚ್ಚಿದ್ದು ಈ ಭಾಗದಲ್ಲಿ ಸುಮಾರು 2916 ಎಕರೆ ಅರಣ್ಯ ಭೂಮಿ ಇದೆ. 1081 ಎಕರೆ ಜಮೀನಿದೆ ಇದರಲ್ಲಿ 840 ಎಕರೆ ಕಂದಾಯ ಭೂಮಿಯನ್ನು ಈಗಾಗಲೇ ಅರಣ್ಯ ಇಲಾಖೆಗೆ ವರ್ಗಾಯಿಸಿದ್ದು. ಕಾಡು ಪ್ರಾಣಿಗಳ ರಕ್ಷಣೆಗೆ ಜಿಲ್ಲಾಡಳಿತ ನೆರವು ನೀಡಿದೆ. ಪ್ರಸ್ತಾವಿತ ಜಮೀನು, ಕರಡಿ, ಚಿರತೆಗಳ ಸಂಖ್ಯೆ, ಅವುಗಳ ದಾಳಿ ಹಾಗೂ ಬೆಳೆಹಾನಿ ಮಾಹಿತಿ ಆಧರಿಸಿ ಅರಣ್ಯ ಇಲಾಖೆ - ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ." ಕುರಿತಂತೆ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಹೇಳಿಕೆ.**

******

ಕೊಪ್ಪಳ ಜಿಲ್ಲೆಯಲ್ಲಿ "**ಕರಡಿ ಸಂರಕ್ಷಣಾ ಮೀಸಲು ಪ್ರದೇಶ**"ವೆಂದು ಘೋಷಣೆ ಮಾಡುವ ಪ್ರಸ್ತಾವನೆಗೆ ದಿನಾಂಕ:19-01-2021ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ 15ನೇ ವನ್ಯಜೀವಿ ಮಂಡಳಿಯಲ್ಲಿ ಈಗಾಗಲೇ ಅನುಮೋದನೆ ನೀಡಲಾಗಿರುತ್ತದೆ. ದಿನಾಂಕ: 17.11.2022 ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಅನುಮೋದಿಸಿರುವಂತೆ, ಕೊಪ್ಪಳ ತಾಲ್ಲೂಕಿನ ಇರಕಲ್ ಗಡ ಹೋಬಳಿಯ, ಹಿರೇಸೂಳಿಕೇರಿ, ಚಿಕ್ಕಸೂಳಕೇರಿ, ಆಚಾರ ತಿಮ್ಮಾಪೂರ, ಹೊಸಗಲ್, ಚಿಲಕಮುಖಿ, ಜಿನ್ನಾಪೂರ, ಮೇಟಗಲ್, ಹೊಸೂರು ಮತ್ತು ಅರಸಿನಕೆರೆ ಗ್ರಾಮಗಳ ಒಟ್ಟು 2918.07 ಎಕರೆ ಪ್ರದೇಶವನ್ನು "**ಹಿರೇಸೂಲೆಕೆರೆ ಕರಡಿ ಸಂರಕ್ಷಣಾ ಮೀಸಲು ಪ್ರದೇಶ**" ವೆಂದು ಘೋಷಿಸಿ ಅಧಿಸೂಚನೆ ಹೊರಡಿಸಲು ಕರಡು ಅಧಿಸೂಚನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.

ಮುಂದುವರೆದು, ಕೊಪ್ಪಳ ಜಿಲ್ಲೆಯಲ್ಲಿ ಮಾನವ –ವನ್ಯಪ್ರಾಣಿ ಸಂಘರ್ಷ ನಿಯಂತ್ರಣ ಹಾಗೂ ವನ್ಯಜೀವಿ ರಕ್ಷಣೆ ಮತ್ತು ಇಂಡಿಯನ್ ಗ್ರೆ ವೂಲ್ಫ್ ಎಂದು ಕರೆಯಲ್ಪಡುವ ತೋಳಗಳು ಭಾರತೀಯ ಸ್ಥಳೀಯ ಪ್ರಭೇದಗಳ ಆವಾಸಸ್ಥಾನದ ಸಂರಕ್ಷಣೆ ದೃಷ್ಟಿಯಿಂದ ಈಗಾಗಲೇ ಕೊಪ್ಪಳ ಜಿಲ್ಲೆಯ ಕನಕಗಿರಿ ಮತ್ತು ಗಂಗಾವತಿ ತಾಲ್ಲೂಕಿನ ಬಂಕಾಪುರ, ಸುಳೇಕಲ್ ಮತ್ತು ಮಲ್ಲಾಪುರ ಗ್ರಾಮಗಳ ಗಂಗಾವತಿ ವಲಯದ ಬಂಕಾಪುರ ಬ್ಲಾಕ್-02 ಮೀಸಲು ಅರಣ್ಯ ಪ್ರದೇಶದ ಒಟ್ಟು 822-03 ಎಕರೆ ಪ್ರದೇಶವನ್ನು ಸರ್ಕಾರದ ಅಧಿಸೂಚನೆ ದಿನಾಂಕ:31-12-2022 ರಂದು "**ಬಂಕಾಪುರ ತೋಳ ವನ್ಯಧಾಮ**"ವೆಂದು ಘೋಷಣೆ ಮಾಡಲಾಗಿದೆ.

ಮುಂದುವರೆದು ಕೊಪ್ಪಳ ಜಿಲ್ಲೆಯಲ್ಲಿ ಮಾನವ –ವನ್ಯಪ್ರಾಣಿ ಸಂಘರ್ಷ ನಿಯಂತ್ರಣ ಮತ್ತು ಇತರೆ ಕಾಮಗಾರಿಗಳಿಗಾಗಿ 2023-24ನೇ ಸಾಲಿಗೆ ರಾಜ್ಯ ವಲಯ ಯೋಜನೆ "4406- Capital Outlay on Forestry & Wildlife-01-Forestry-101-Forest Conservation, Development & Regeneration-0-01-Survey & Demarcation, Forest Protection, Wildlife Management & Man- Animal Conflict Measures: Man-animal Conflict-139-Major Works [Man-Animal Conflict Measures]" ರಡಿ ಕೊಪ್ಪಳ ವಿಭಾಗಕ್ಕೆ ರೂ.20.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ. ಮುಂದುವರೆದು ಕೇಂದ್ರ ಪುರಸ್ಕೃತ ವನ್ಯಜೀವಿ ಆವಾಸ ಸ್ಥಾನ ಅಭಿವೃದ್ಧಿ (IDWH) ಇದರಡಿ ಒಟ್ಟು ರೂ.98.848 ಲಕ್ಷಗಳ ಅನುದಾನವನ್ನು **"ಬಂಕಾಪುರ ತೋಳ ವನ್ಯಧಾಮ"**ದ ಆವಾಸಸ್ಥಾನ ಹಾಗೂ ಇತರೆ ವನ್ಯಜೀವಿ ಸಂರಕ್ಷಣಾ ಕಾಮಗಾರಿಗಳಿಗಾಗಿ ಹಂಚಿಕೆ ಮಾಡಲಾಗಿದೆ.

**ಸಂಖ್ಯೆ:ಅಪಜೀ 159 ಎಫ್‌ಡಬ್ಲ್ಯೂಎಲ್ 2023**

(ಈಶ್ವರ ಬಿ. ಖಂಡ್ರೆ)
**ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**